***ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 05.03.2026***

***<u>ಪಾಟೀ ಸವಾಲುಃ ಪರ ವಕೀಲರಿಂದಃ</u>***

*1. ನಾನು 9 ನೇ ತರಗತಿವರೆಗೆ ಓದಿರುತ್ತೇನೆ. ತಮ್ಮಣ್ಣಗೌಡ 1998 ರಲ್ಲಿ ತೀರಿ ಹೋಗಿರುತ್ತಾರೆ. ಐಯಣ್ಣನವರು ಯಾವಾಗ ಮೃತರಾದರು ಎಂದು ಈಗ ಹೇಳಲು ಜ್ಞಾಪಕ ಇಲ್ಲ. ತಮ್ಮಣ್ಣಗೌಡ ಮತ್ತು ಐಯಣ್ಣನವರ ಮರಣ ಪ್ರಮಾಣಪತ್ರ ಕೊಡುತ್ತೀರಾ ಎಂದರೆ ಸಾಕ್ಷಿ ತಮ್ಮಣ್ಣಗೌಡರದ್ದು ಕೊಡುತ್ತೇನೆಂದು ಹೇಳುತ್ತಾರೆ. ಸಿಂಗಾರಮ್ಮ, ಗೌರಮ್ಮ, ಸಣ್ಣಮ್ಮ, ಪುಟ್ಟಲಕ್ಷ್ಮಿ ಹಾಗೂ ವೆಂಕಟೇಶರವರು ಯಾವಾಗ ಮರಣ ಹೊಂದಿದರು ಎಂದರೆ ಸಾಕ್ಷಿ ಅದು ಗೊತ್ತಿಲ್ಲವೆಂದು ಹೇಳುತ್ತಾರೆ. ಸಿಂಗಾರಮ್ಮ, ಗೌರಮ್ಮ, ಸಣ್ಣಮ್ಮ, ಪುಟ್ಟಲಕ್ಷ್ಮಿ ಹಾಗೂ ವೆಂಕಟೇಶರವರು ನಿಮ್ಮ ಜೊತೆ ವಾಸ ಇಲ್ಲದೆ ಇದ್ದರಿಂದ ಯಾವಾಗ ಮೃತರಾದರು ಎಂದು ನಿಮಗೆ ಗೊತ್ತಿಲ್ಲ ಎಂದರೆ ಸರಿ. ನಿಮ್ಮ ಅಕ್ಕ ಚನ್ನಮ್ಮನವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ನನಗೇನು ತೊಂದರೆ ಇಲ್ಲ. ನಿಪಿ.1 ರಲ್ಲಿ ಸಿಂಗಾರಮ್ಮ, ಗೌರಮ್ಮ, ಸಣ್ಣಮ್ಮ, ಪುಟ್ಟಲಕ್ಷ್ಮಿ ಹಾಗೂ ವೆಂಕಟೇಶ ಯಾರ ಮಕ್ಕಳು ಎಂದು ತೋರಿಸಿಲ್ಲ ಎಂದರೆ ಸರಿ.*

*2. ಕಂದಾಯ ಇಲಾಖೆಯವರು ನೀಡುವ ನಿಮ್ಮ ಕುಟುಂಬದ ವಂಶವೃಕ್ಷ ನೀಡಲು ತೊಂದರೆ ಇದೆಯಾ ಎಂದರೆ ಸಾಕ್ಷಿ ತೊಂದರೆ ಇದೆ ಎಂದು ಹೇಳುತ್ತಾರೆ. ನಿಮ್ಮ ಅಕ್ಕ ಚನ್ನಮ್ಮ ಹಕ್ಕು ಬಿಡುಗಡೆ ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ.24 ರಲ್ಲಿ ದಾವಾ*

ಸ್ವತ್ತುಗಳು ನಮೂದಾಗಿಲ್ಲ ಎಂದರೆ ಸರಿ. ಚನ್ನಮ್ಮನವರಿಗೆ ಈಗ 82 ವರ್ಷ. ನಿಪಿ.24 ನ್ನು ನಿಮ್ಮ ತಂದೆ ಅಸ್ತಿಯನ್ನು ಲಪಟಾಯಿಸಬೇಕೆಂದು ಸೃಷ್ಟಿಸಿರುತ್ತೀರಾ ಎಂದರೆ ಸರಿಯಲ್ಲ. ನಿಪಿ.24 ಕ್ಕೆ ಯಾರೆಲ್ಲಾ ಸಾಕ್ಷಿ ಹಾಕಿದ್ದಾರೆಂದು ನನಗೆ ಗೊತ್ತಿಲ್ಲ. ಬೆಟ್ಟೇಗೌಡ ಉರುಪ್ ತಮ್ಮಣ್ಣಗೌಡ ಹಾಗೂ 19 ನೇ ಪ್ರತಿವಾದಿ ತಂದೆ ಬೆಟ್ಟೇಗೌಡ ಅಲಿಯಾಸ್ ಐಯಣ್ಣನವರ ಜೀವಿತ ಕಾಲದಲ್ಲಿ ಮೌಖಿಕವಾಗಿ ವಿಭಾಗವಾಗಿ ಅರ್ದ ಅರ್ದ ಸ್ವತ್ತಿನಲ್ಲಿ ಅನುಭವ ಮಾಡಿಕೊಂಡು ಬರುತ್ತಿರುತ್ತೀರಾ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಸ್ವಲ್ಪ ಸ್ವಲ್ಪ ಭಾಗ ಉಳುಮೆ ಮಾಡಿಕೊಂಡು ಬರುತ್ತಿದ್ದೆವೆಂದು ಹೇಳುತ್ತಾರೆ. ದಾವಾ ಷೆಡೂಲ್ ಸ್ವತ್ತುಗಳಲ್ಲಿ ಸ್ವಲ್ಪ ಸ್ವಲ್ಪ ಮಾಡುತ್ತಿದ್ದೇವೆಂದು ಹೇಳುತ್ತಾರೆ. ಸ್ವಲ್ಪ ಸ್ವಲ್ಪ ಭಾಗ ಅನುಭವ ಮಾಡುತ್ತಿಡಿಲ್ಲ ಮೌಖಿಕ ವಿಭಾಗದಂತೆ ಅನುಭವ ಮಾಡಿಕೊಂಡು ಬರುತ್ತಿದ್ದೀರಾ ಎಂದರೆ ಸರಿಯಲ್ಲ. ನೀವು ಮತ್ತು 19 ನೇ ಪ್ರತಿವಾದಿ ಬೇರೆಯಾಗಿ ಬೋರು ಹಾಕಿಸಿಕೊಂಡು ತೆಂಗಿನ ಗಿಡಗಳನ್ನು ನೆಟ್ಟು ಜಮೀನನ್ನು ಅಬಿವೃದ್ದಿ ಪಡಿಸಿರುತ್ತಾರೆ ಎಂದರೆ ಸರಿ.

3. ನೀವು ಕಳುಹಿಸಿದ್ದ ನೋಟೀಸ್ ಗೆ 19 ನೇ ಪ್ರತಿವಾದಿ ಅನುಭವದಂತೆ ಖಾತೆ ಮಾಡಿಸಿಕೊಳ್ಳಲು ಅವರದ್ದೇನು ತಕರಾರು ಇಲ್ಲ ಎಂದು ಮರು ಉತ್ತರ ನೀಡಿದ್ದರು ಎಂದರೆ ಸರಿ. ಸಾಕ್ಷಿ ಸ್ವತಃ ಅರ್ದ ಭಾಗಕ್ಕೆ ಖಾತೆ ಮಾಡಿಸಿಕೊಟ್ಟರೆ ನನ್ನದೇನು ತಕರಾರು ಇಲ್ಲವೆಂದು ಹೇಳುತ್ತಾರೆ.

ಈ ಹಂತದಲ್ಲಿ ಉಭಯ ಪಕ್ಷಗಾರರನ್ನು ರಾಜೀ ಮಾಡಿಕೊಳ್ಳುವ ಇಚ್ಚೆ ಇದೆಯಾ ಎಂದು ಕೇಳಿದಾಗ ಉಭಯಿ ಪಕ್ಷಗಾರರು ಗ್ರಾಮದಲ್ಲಿ ಕುಳಿತು ಮಾತನಾಡಿಕೊಂಡು ರಾಜೀ ಮಾಡಿಕೊಳ್ಳುತ್ತೇವೆಂದು ಹೇಳಿರುವುದರಿಂದ ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ನೀಡಿ ಮುಂದೂಡಲಾಯಿತು.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.

ಓ ಹೇ ಕೇ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.